೩೮೬೪ (೪೭೭೨) **ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. ಬ್ರಹ್ಮಾವರ** :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಅಧೀನದಲ್ಲಿರುವ ವಿದ್ಯಾರ್ಥಿ ವಸತಿ ನಿಲಯಗಳ ಸಂಖ್ಯೆ ಎಷ್ಟು;

ಆ) ಉಡುಪಿ ತಾಲ್ಲೂಕಿನ ವಸತಿ ನಿಲಯಗಳನ್ನು ಮೇಲ್ದರ್ಜೆಗೇರಿಸಿ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶ ಕಲ್ಪಿಸಲು ಸಾಧ್ಯವಿಲ್ಲವೇ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಟ್ಟು ೧೭೬೪ ವಿದ್ಯಾರ್ಥಿನಿಲಯಗಳು ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿವೆ.

ಆ) ಉಡುಪಿ ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿಯ ೮ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ : ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಕುರಾಡಿ ಬಾಲಕರ ವಿದ್ಯಾರ್ಥಿನಿಲಯದ ಸಂಖ್ಯಾ ಬಲವನ್ನು ೫೦ ರಿಂದ ೭೫ಕ್ಕೆ ಹೆಚ್ಚಿಸುವುದನ್ನು ಪರಿಶೀಲಿಸಲಾಗುತ್ತಿದೆ.

೩೮೬೫ (೪೭೪೪) **ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)** :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೃಂಗೇರಿ, ನ.ರಾ.ಪುರ ಹಾಗೂ ಕೊಪ್ಪ ತಾಲ್ಲೂಕುಗಳಲ್ಲಿ ಕಳೆದ ಮೂರು ಸಾಲುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳೆಷ್ಟು; (ವರ್ಷವಾರು ತಾಲ್ಲೂಕುವಾರು ವಿವರ ನೀಡುವುದು.)

ಆ) ಇವುಗಳಲ್ಲಿ ಕೊಳವೆ ಬಾವಿ ಹಾಗೂ ತೆರೆದ ಬಾವಿ ಎಷ್ಟು;

ಇ) ವಿದ್ಯುದ್ದೀಕರಣ ಆಗದೇ ಇರುವ ಕೊಳವೆ ಬಾವಿಗಳೆಷ್ಟು ? ಯಾವ ಕಾರಣಕ್ಕೆ ಮತ್ತು ಎಂದಿನಿಂದ ವಿದ್ಯುದ್ದೀಕರಣ ಆಗಿರುವುದಿಲ್ಲ" ಯಾವಾಗ ವಿದ್ಯುದ್ದೀಕರಣ ಮಾಡಲಾಗುವುದು;

ಈ) ವಿದ್ಯುದ್ದೀಕರಣ ಆಗದೇ ಇರುವ ಕೊಳವೆ ಬಾವಿಗಳೆಷ್ಟು ? ಯಾವ ಕಾರಣಕ್ಕೆ ಮತ್ತು ಎಂದಿನಿಂದ ವಿದ್ಯುದ್ದೀಕರಣ ಆಗಿರುವುದಿಲ್ಲ" ಯಾವಾಗ ವಿದ್ಯುದ್ದೀಕರಣ ಮಾಡಲಾಗುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಕಳೆದ ಮೂರು ವರ್ಷಗಳಲ್ಲಿ ಶೃಂಗೇರಿ, ನ.ರಾ.ಪುರ ಹಾಗೂ ಕೊಪ್ಪ ತಾಲ್ಲೂಕುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯ ವೈಯಕ್ತಿಕ ಯೋಜನೆಯಲ್ಲಿ ೮ ಫಲಾನುಭವಿಗಳನ್ನು ಹಾಗೂ ಸಾಮೂಹಿಕ ಯೋಜನೆಯಲ್ಲಿ ೪ ಮಂದಿ ಆಯ್ಕೆಯಾಗಿರುತ್ತಾರೆ. ವಿವರ ಈ ಮುಂದಿನಂತಿವೆ.

ಕ್ರ.ಸಂ	ತಾಲ್ಲೂಕು	೨೦೦೨-೦೩		೨೦೦೩-೦೪		೨೦೦೪-೦೫		ಒಟ್ಟು	
		ವೈ	ಸಾ	ವೈ	ಸಾ	ವೈ	ಸಾ	ವೈ	ಸಾ
೧	ಶೃಂಗೇರಿ	–	–	–	–	–	–	–	–
೨	ನ.ರಾ.ಪುರ	೦೨	–	೦೨	–	೦೪	೦೪	೦೮	೦೪
೩	ಕೊಪ್ಪ	–	–	–	–	–	–	–	–
	ಒಟ್ಟು	**೦೨**	–	**೦೨**	–	**೦೪**	**೦೪**	**೦೮**	**೦೪**

ಸಾ – ಸಾಮೂಹಿಕ ನೀರಾವರಿ ಯೋಜನೆ , ವೈ – ವೈಯಕ್ತಿಕ ನೀರಾವರಿ ಯೋಜನೆ.

ಶೃಂಗೇರಿ, ನ.ರಾ.ಪುರ ಹಾಗೂ ಕೊಪ್ಪ ತಾಲ್ಲೂಕುಗಳು ಒಂದು ವಿಧಾನ ಸಭಾ ಕ್ಷೇತ್ರಕ್ಕೆ ಬರುತ್ತವೆ, ನಿಗಮವು ವಿಧಾನ ಸಭಾ ಕ್ಷೇತ್ರವಾರು ಗುರಿಯನ್ನು ನೀಡಲಾಗುತ್ತಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

ಕಳೆದ ಮೂರು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ೧೭ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ವರ್ಷಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ.

ವರ್ಷ	ಶೃಂಗೇರಿ	ನ.ರಾಪುರ	ಕೊಪ್ಪ
೨೦೦೨-೦೩	–	೮	೧
೨೦೦೩-೦೪	–	೫	–
೨೦೦೪-೦೫	–	೩	–

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

ಶೃಂಗೇರಿ, ಕೊಪ್ಪ ಮತ್ತು ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ೭೩ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ವರ್ಷವಾರು ತಾಲ್ಲೂಕುವಾರು ಸೌಲಭ್ಯ ನೀಡಿದಂತಹ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	೨೦೦೨-೦೩		೨೦೦೩-೦೪		೨೦೦೪-೦೫	
	ಪಜಾತಿ	ಪವರ್ಗ	ಪಜಾತಿ	ಪವರ್ಗ	ಪಜಾತಿ	ಪವರ್ಗ
ಎನ್.ಆರ್ಪುರ	–	–	೨	–	೨	೧
ಕೊಪ್ಪ	೮	೭	೩	–	೧	–
ಶೃಂಗೇರಿ	೯	೧೩	೧೦	೧	೧೬	೧
ಒಟ್ಟು	೧೭	೨೦	೧೫	೧	೧೯	೧

ಆ) ಹಿಂದುಳಿದ ವರ್ಷಗಳ ಅಭಿವೃದ್ಧಿ ನಿಗಮವು ೨೦ ಕೊಳವೆ ಬಾವಿಗಳ ಪೈಕಿ ೫ ಕೊಳವೆ ಬಾವಿಗಳನ್ನು ಮಾತ್ರ ಕೊರೆಯಲಾಗಿದೆ. ಉಳಿದ ಕೊಳವೆ ಬಾವಿ ಕೊರೆಯುವ ಕಾರ್ಯ ಪ್ರಗತಿಯಲ್ಲಿದೆ. ತೆರೆದ ಬಾವಿಗಳು ಯಾವುದೂ ಇರುವುದಿಲ್ಲ..

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ :

ನಿಗಮದಿಂದ ೭ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

ಇವುಗಳಲ್ಲಿ ಕೊಳವೆ ಬಾವಿಗಳು ೦೧, ತೆರೆದ ಬಾವಿಗಳು ೭

ಇ) ಕೊರೆದ ೫ ಕೊಳವೆ ಬಾವಿಗಳಿಗೆ ವಿದ್ಯುದ್ದೀಕರಣ ಆಗಿರುವುದಿಲ್ಲ. ಪಂಪ್ ಸೆಟ್ ಸರಬರಾಜು ಮಾಡಲು ಆದೇಶ ನೀಡಲಾಗಿದೆ. ವೈಯಕ್ತಿಕ ಯೋಜನೆಯಲ್ಲಿ ಫಲಾನುಭವಿಗಳೇ ವಿದ್ಯುದ್ದೀಕರಣ ವೆಚ್ಚವನ್ನು ಭರಿಸಿ ವಿದ್ಯುತ್ ಸಂಪರ್ಕ ಪಡೆಯಬೇಕಾಗಿದೆ. ಸಾಮೂಹಿಕ ಯೋಜನೆಯಲ್ಲಿ ನಿಗಮವು ಪ್ರತಿ ಕೊಳವೆ ಭಾವಿಗೆ ೨೫೦೦೦/- ರೂ.ಗಳ ಹಣವನ್ನು ಪಾವತಿಸಲಾಗುತ್ತಿದೆ. ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುವ ಕೊಳವೆ ಬಾವಿಗಳ ಬಗ್ಗೆ ೨೪-೦೫-೨೦೦೫ ರಂದು ಜರುಗಿದ

ಸಭೆಯ ನಿರ್ಣಯದನ್ವಯ ಜುಲೈ ೨೦೦೫ರಿಂದ ಮಾರ್ಚ್ ೨೦೦೬ಗೆ ಒಳಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಸರಬರಾಜು ಕಂಪನಿವಾರು ಜಿಲ್ಲಾವಾರು ಹಾಗೂ ಮಾಸಿಕವಾರು ಗುರಿಯನ್ನು ನಿಗದಿಪಡಿಸಿ ವಿದ್ಯುತ್ ಸಂಪರ್ಕ ಮಾಡಲು ಕೆ.ಪಿ.ಟಿ.ಸಿ.ಎಲ್ ರವರು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೂಚನೆ ನೀಡಿರುತ್ತಾರೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

೧೬ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿದೆ. ಬೆಸ್‌ಕಾಂನವರು ಸದರಿ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿರುತ್ತದೆ. ಕಳೆದ ಮೂರು ವರ್ಷಗಳಿಂದ ಈ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿರುತ್ತದೆ. ನಿಗಮವು ಕರ್ನಾಟಕ ವಿದ್ಯುದ್ದೀಪ್ರಸರಣಾ ನಿಗಮದೊಡನೆ ಚರ್ಚಿಸಿದ್ದು, ಈ ಕೊಳವೆ ಬಾವಿಗಳನ್ನು ಆದಷ್ಟು ಬೇಗನೆ ವಿದ್ಯುದ್ದೀಕರಣ ಗೊಳಿಸಲು ತಿಳಿಸಲಾಗಿರುತ್ತದೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ :-

ವಿದ್ಯುದ್ದೀಕರಣವಾಗದೇ ಇರುವ ಕೊಳವೆ ಬಾವಿಗಳು ಇರುವುದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೩೮೬೬ (೪೩೮೬) ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ನೀಡಬೇಕಾದುದು ಎಷ್ಟು;

ಆ) ಇನ್ನೂ ಎಷ್ಟು ಹಣ ನೀಡಲು ಬಾಕಿ ಇದೆ;

ಇ) ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಪಿ.ಜಿ. ಆರ್.. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ದಿನಾಂಕ : ೧-೧-೯೯ ರಿಂದ ೩೧.೩.೨೦೦೫ ರವರೆಗೆ ರೂ. ೪೯೨.೮೮ ಕೋಟಿ ಸಹಾಯಧನವನ್ನು ೨೦೬೪ಳಳ ಘಟಕಗಳಿಗೆ ಮಂಜೂರು ಮಾಡಲಾಗಿದ್ದು, ದಿನಾಂಕ : ೧-೧-೯೯ ರಿಂದ ೩೧-೩-೨೦೦೪ ರವರೆಗೂ ಸಹಾಯಧನ ಮಂಜೂರಾದ ಮೊತ್ತದಲ್ಲಿ ಶೇ. ೫೦ರಷ್ಟು ಎಲ್ಲ ಘಟಕಗಳಿಗೂ (ಕೋಳಿ ಸಾಕಾಣಿಕೆ,